**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಜೇವರಗಿ**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆಃ 322/2018**

**ಚಾ.ಸಾ - 8**
**ಪ್ರಾ.ಸಾ - 8**

**ಸಾಕ್ಷಿಗೆ ದಿನಾಂಕ 11-02-2026ರಂದು ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | ಃ | ಖಂಡಪ್ಪ |
| ತಂದೆಯ ಹೆಸರು | ಃ | ಮಲ್ಲಪ್ಪ |
| ವಯಸ್ಸು | ಃ | 70 ವರ್ಷ |
| ಉದ್ಯೋಗ | ಃ | ಏನೂ ಇಲ್ಲ |
| ವಾಸಸ್ಥಳ | ಃ | ಮದರಿ |

**<u>ಮುಖ್ಯವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ</u>**

ನ್ಯಾಯಾಲಯದ ಮುಂದಿರುವ 2ನೇ ಆರೋಪಿ ನನಗೆ ಗೊತ್ತಿಲ್ಲ. ಚಾಸಾ-1, 6, 7, 9 ಮತ್ತು 10 ಗೊತ್ತು. ಚಾಸಾ-11 ರಿಂದ 18 ಗೊತ್ತಿಲ್ಲ. ಮೃತ ಮಲ್ಲಣ್ಣ ನನಗೆ ಗೊತ್ತು.

5-6 ವರ್ಷಗಳ ಹಿಂದೆ ಮದರಿಯಿಂದ ಸಗರಕ್ಕೆ ನಿಶ್ಚಿತಾರ್ಥಕ್ಕಾಗಿ ಕ್ರೂಸರ್ ವಾಹನದಲ್ಲಿ ಹೋಗಿರುತ್ತೇವೆ. ನಾವು ಬರುವಂತಹ ಕ್ರೂಸರ್ ನ ಚಾಲಕ ಮದ್ಯಪಾನ ಮಾಡಿ ವಾಹನ ನಡೆಸುತ್ತಿದ್ದನು ಆ ಸಮಯದಲ್ಲಿ ಮುದಬಾಳ ಕ್ರಾಸ್ ಹತ್ತಿರ ಲಾರಿ ನಿಂತಿತ್ತು ಸದರಿ ಲಾರಿಗೆ ಕ್ರೂಸರ್ ಚಾಲಕ ಡಿಕ್ಕಿಪಡಿಸಿದನು. ಸದರಿ ಅಪಘಾತದಲ್ಲಿ ನನ್ನ ತಲೆಗೆ ಪೆಟ್ಟಾಗಿ ಹೊಲಿಗೆ ಹಾಕಿರುತ್ತಾರೆ. ಸದರಿ ಅಪಘಾತದಿಂದ ಕಣ್ಣಿನ ಮೇಲೆ ಪರಿಣಾಮ ಆಗಿ ಕಣ್ಣು ಸರಿಯಾಗಿ ಕಾಣಿಸುವುದಿಲ್ಲ. ಸದರಿ ಕ್ರೂಸರಿನಲ್ಲಿ ಪ್ರಯಾಣಿಸುತ್ತಿದ್ದಂತಹ 3 ಜನರಿಗೆ ಗಾಯಗಳಾಗಿದ್ದವು. ಅವರಲ್ಲಿ ಒಬ್ಬರ ಕಾಲು ಮುರಿದಿತ್ತು. ಸದರಿ ಅಪಘಾತದಲ್ಲಿ ಚಾಸಾ-9ರವರಿಗೆ ಪಟ್ಟಾಗಿತ್ತು. ಸದರಿ ಅಪಘಾತದಲ್ಲಿ ಕ್ರೂಸರ್ ಹೋಗಿ ಲಾರಿಗೆ ಸಿಕ್ಕಿಕೊಂಡಿತ್ತು ಆದ್ದರಿಂದ ಮಲ್ಲಣ್ಣ ಮೃತಪಟ್ಟಿರುತ್ತಾನೆ. ಅಪಘಾತವು ಕ್ರೂಸರ್ ಚಾಲಕನ ತಪ್ಪಿನಿಂದಾಗಿರುತ್ತದೆ. ಯಾರೋ ಜೇವರ್ಗಿರವರು ಬಂದು ಹೋಗಿರುತ್ತಾರೆ ಅವರ ಹತ್ತಿರ ಹೇಳಿರುತ್ತೇನೆ ಅವರು ಯಾರು ಎಂದು ಗೊತ್ತಿಲ್ಲ.

ಸಾಕ್ಷಿಗೆ ನಿಪಿ-3 ಮತ್ತು 4 ಕ್ರೂಸರ್ ವಾಹನ ಇರುವಂತಹ ಫೋಟೊಗಳನ್ನು ತೋರಿಸಲಾಗಿ ಸಾಕ್ಷಿ ಅವುಗಳನ್ನು ನೋಡಿ ಗುರುತಿಸಿರುತ್ತಾರೆ.

(ಮಾನ್ಯ ಸ.ಸ.ಅ ರವರು ಸಾಕ್ಷಿ ಭಾಗಶಃ ಪ್ರತಿಕೂಲವಾಗಿ ಸಾಕ್ಷಿ ನುಡಿದಿದ್ದಾರೆ ಹಾಗಾಗಿ ಅವರನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಘೋಷಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಕೋರಿದ್ದು, ಮುಖ್ಯ ವಿಚಾರಣೆಯಲ್ಲಿ ಸಾಕ್ಷಿ ಅಭಿಯೋಜನೆಯ ಪ್ರಕರಣಕ್ಕೆ ವ್ಯತಿರೀಕ್ತವಾಗಿ ಸಾಕ್ಷ್ಯ ನುಡಿದಿರುವುದು ಮೇಲ್ನೋಟಕ್ಕೆ ಕಂಡುಬಂದಿರುವ ಕಾರಣ ಮಾನ್ಯ ಅಭಿಯೋಜನೆಯವರಿಗೆ ಪಾಟೀಸವಾಲು ಮಾಡಲು ಅನುಮತಿಸಲಾಯಿತು)

**<u>ಪಾಟೀ ಸವಾಲುಃ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರಿಂದ</u>**

ದಿಃ 13-03-2015 ರಂದು ಸಂಜೆ 06-30 ಗಂಟೆ ಸುಮಾರಿಗೆ ಅಪಘಾತ ಆಗಿರುತ್ತದೆ ಎಂದರೆ ಸರಿ. ಆ ಸಮಯದಲ್ಲಿ ಲಾರಿ ನಂಬರ್ ಎಂ.ಹೆಚ್-38 ಡಿ-0514 ನೇದ್ದರ ಚಾಲಕನು ಯಾವುದೇ ಇಂಡಿಕೇಟರ್ ಹಾಕದೇ ಸದರಿ ಲಾರಿಯನ್ನು ರಸ್ತೆಯ ಮಧ್ಯದಲ್ಲಿ ನಿಲ್ಲಿಸಿದ್ದನು ಆ ಸಮಯದಲ್ಲಿ ಕ್ರೂಸರ್ ಜೀಪ್ ವಾಹನದ ನಂ.ಕೆಎ-32 ಎಂ.-6243ನೇದ್ದರ ಚಾಲಕನು ಅತಿವೇಗ ಮತ್ತು ಅಲಕ್ಷತನದಿಂದ ಚಾಲಕನೆ ಮಾಡಿಕೊಂಡು ಹೋಗಿ ನಿಂತಿದ್ದಂತಹ ಲಾರಿಗೆ ಡಿಕ್ಕಿಪಡಿಸಿದನು ಎರಡೂ ವಾಹನಗಳ ಚಾಲಕರಿಂದ ಅಪಘಾತ ಆಗಿರುತ್ತದೆ ಎಂದರೆ ಸರಿ. ಸದರಿ ಅಪಘಾತದಲ್ಲಿ ಚಾಸಾ-6 ರಿಂದ 9ರವರಿಗೆ ತೀವ್ರ ಸ್ವರೂಪದ ಗಾಯಗಳು ಚಾಸಾ-10 ರಿಂದ 17ರವರಿಗೆ ಸಾದಾಸ್ವರೂಪದ ಗಾಯಗಳಾಗಿರುತ್ತವೆ ಎಂದರೆ ಸರಿ.

ಪೊಲೀಸರ ಮುಂದೆ ಹೇಳಿಕೆ ಮತ್ತು ಮರುಹೇಳಿಕೆ ನೀಡಿರುತ್ತೀರಿ ಎಂದರೆ ನನ್ನ ತಲೆಗೆ ಗಾಯವಾಗಿದ್ದರಿಂದ ಏನು ಹೇಳಿದ್ದೇನೆ ಎಂದು ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಸದರಿ ಹೇಳಿಕೆಯ ಅಂಶಗಳನ್ನು ನಿಪಿ-16 ಎಂದು ಹಾಗೂ ಮರು ಹೇಳಿಕೆಯನ್ನು ನಿಪಿ-17 ಎಂದು ಗುರುತಿಸಲಾಯಿತು.

**<u>ಆರೋಪಿ ಪರ ವಕೀಲರಿಂದ ಪಾಟೀ ಸವಾಲು ಇರುವುದಿಲ್ಲ.</u>**

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತುಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೆ.ಸರಿ ಅದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂಡಾಧಿಕಾರಿಗಳು ಜೇವರಗಿ